

# ವಿಸ್ಮಯ ಇಗರ್ಜಿ



'ಕಾಪ್ಲಿಕಾ ಜಾಸ್ಜೆ' ಹೆಸರಿನ ಪುಟ್ಟ ಚರ್ಚ್ ಒಂದು ಪೋಲೆಂಡ್ ದೇಶದ ನೈರುತ್ಯ ದಿಕ್ಕಿನಲ್ಲಿನಲ್ಲಿನ ಕ್ಲೋಡ್ಜ್ಕೊ ಎಂಬಲ್ಲಿದೆ. ರಸ್ತೆ ಬದಿಯಲ್ಲಿರುವ ಈ ಚರ್ಚ್ ಹೊರಗಿನಿಂದ ನೋಡಿದರೆ ಇತರೇ ಸಾಧಾರಣ ಚರ್ಚ್‌ನಂತೆ ಕಂಡರೂ ಮರದ ಒಳಬಾಗಿಲು ಅದ್ಭುತವಾಗಿದೆ. ವಿಸ್ಮಯಕಾರಿ ಕಲ್ಪನೆಯನ್ನು ತೆರೆದು ತೋರಿಸುವಂಥ ಒಳ ವಿನ್ಯಾಸ ಇಲ್ಲಿದೆ. ಯುದ್ಧಗಳಲ್ಲಿ ಸತ್ತವರ ಹಾಗೂ ಸಾಂಕ್ರಾಮಿಕ ರೋಗಗಳಿಗೆ ಬಲಿಯಾಗಿದ್ದ 3000 ಕ್ಕೂ ಹೆಚ್ಚು ಜನರ ತಲೆ ಬುರುಡೆಗಳು ಹಾಗೂ ಕೈ ಕಾಲುಗಳ ಎಲುಬುಗಳಿಂದ ಇಲ್ಲಿನ ಗೋಡೆ ಹಾಗೂ ಮೇಲ್ಛಾವಣಿಯನ್ನು ಅಲಂಕರಿಸಲಾಗಿದೆ.

ಇಲ್ಲಿನ ನೆಲ ಮಾಳಿಗೆಯು ಬಲಿಪೀಠವಾಗಿದ್ದು 21,000 ಕ್ಕೂ ಹೆಚ್ಚು ಜನರನ್ನು ಇಲ್ಲಿ ಹೂಳಲಾಗಿದೆ. ಇಲ್ಲಿನ ಪಾದ್ರಿಯಾಗಿದ್ದ ವಾಕ್ಲವ್ ಟೊಮೊಸೆಕ್ ಎಂಬಾತ 1776 ಹಾಗೂ1804 ರ ನಡುವೆ ನಡೆದ ಯುದ್ಧದ ಸಂದರ್ಭದಲ್ಲಿ ಬಲಿಯಾಗಿ ಸಾವಿರಾರು ಸಂಖ್ಯೆಯಲ್ಲಿ ಸಾಮೂಹಿಕ ಸಮಾಧಿಯಾಗಿದ್ದವರೆಲ್ಲರ ಅಸ್ಥಿಪಂಜರಗಳನ್ನು ಒಟ್ಟುಗೂಡಿಸಿದ್ದ. ಇವುಗಳನ್ನು ಶುಚಿಗೊಳಿಸಿ ಅವುಗಳನ್ನು ಅತ್ಯಂತ ಜಾಗರೂಕತೆಯಿಂದ ಜೋಡಿಸಿಟ್ಟಿದ್ದಾನೆ. ರೋಮ್ಸ್ ನಲ್ಲಿರುವ ಮೃತರ ಎಲುಬುಗಳ ಉಗ್ರಾಣ ಮತ್ತು ಸಮಾಧಿ ಗುಹೆಗಳನ್ನು ಹೋಲುವ ಈ ಚರ್ಚ್ ಸತ್ತವರ ನೆನಪಿನ ಸ್ಮಾರಕವಾಗಿದೆ.

ಅಲ್ಲದೆ 1804 ರಲ್ಲಿ ಮಡಿದ ಟೊಮೊಸೆಕ್ ನ ತಲೆಬುರುಡೆಯನ್ನೂ ಸಹ ಇಲ್ಲಿ ಜೋಡಿಸಿಡಲಾಗಿದೆ. ಇಲ್ಲಿರುವ ಅಸಂಖ್ಯಾತ ತಲೆಬುರುಡೆ ಹಾಗೂ ಎಲುಬುಗಳು ಭಯಾನಕ ಕಥೆಯನ್ನು ನಮ್ಮ ಕಲ್ಪನೆಗೆ ಬಿಚ್ಚಿಡುತ್ತವೆ.

■ ಪ್ರಿಯಾಂಕ ವಿ.ಹೆಚ್.

